50 ಸುವರ್ಣ ಸಂಭ್ರಮ

# ನಿಮ್ಮೊಡನೆ

> ಶಾಲೆಯಲ್ಲಿ ಮಕ್ಕಳಿಗೆ ಪ್ರವೇಶ ನೀಡುವ ಸಲುವಾಗಿ ಇನ್ನು ಮುಂದೆ ಪೋಷಕರಿಗೆ ಯಾವುದೇ ರೀತಿಯ ಪರೀಕ್ಷೆ ಹಾಗೂ ಸಂದರ್ಶನ ನಡೆಸುವಂತಿಲ್ಲ. ಮಕ್ಕಳಿಗೂ ನಡೆಸುವಂತಿಲ್ಲ. ಈ ನಿಯಮವನ್ನು ಉಲ್ಲಂಘಿಸಿದರೆ 25 ಸಾವಿರ ರೂ. ದಂಡ ತೆರಬೇಕು. 2ನೇ ಬಾರಿ ತಪ್ಪು ಮಾಡಿದರೆ 50 ಸಾವಿರ ರೂ. ದಂಡ ಕಟ್ಟಬೇಕು.

## ಪೋಷಕರ ಸಂದರ್ಶನಕ್ಕೆ ಕಡಿವಾಣ

ಮನಬಂದಂತೆ ಪ್ರವೇಶ ಪ್ರಕ್ರಿಯೆ ನಡೆಸುವ ಖಾಸಗಿ ಶಾಲೆಗಳಿಗೆ ಕಡಿವಾಣ ಹಾಕಲು ಸರ್ಕಾರ ಮುಂದಾಗಿದೆ. ಈ ಸಂಬಂಧ ಶಿಕ್ಷಣ ಇಲಾಖೆಯು ವೇಳಾಪಟ್ಟಿಯೊಂದನ್ನು ಪ್ರಕಟಿಸಿದೆ.

ಇದರ ಪ್ರಕಾರ ತಮ್ಮ ಶಾಲೆಯಲ್ಲಿ ಲಭ್ಯವಿರುವ ಶೇ.75ರಷ್ಟು ಸೀಟುಗಳ ವೇಳಾಪಟ್ಟಿಯನ್ನು ಮಾರ್ಚ್1ರಂದು ಪ್ರಕಟಿಸಬೇಕು. ಮಾ.20ರಿಂದ 31ರ ವರೆಗೆ ಅರ್ಜಿಗಳನ್ನು ವಿತರಣೆ ಮಾಡಬೇಕು. ಅರ್ಜಿ ಸ್ವೀಕರಿಸಲು ಕೊನೆಯ ದಿನ ಮಾ.31. ಏಪ್ರಿಲ್ 4ರಂದು ಅರ್ಹರ ಪಟ್ಟಿ ಪ್ರಕಟಿಸಿ, ಏ.7ರ ವರೆಗೆ ಆಕ್ಷೇಪಣೆಗೆ ಗಡುವು ನೀಡಬೇಕು. ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿಯನ್ನು ಏ.8ರಂದು ಪ್ರಕಟಿಸಿ, ಏ.15ನ್ನು ಪ್ರವೇಶಕ್ಕೆ ಕೊನೆಯ ದಿನ ಎಂದು ನಿಗದಿಪಡಿಸಬೇಕು. ದ್ವಿತೀಯ ಆಯ್ಕೆ ಪಟ್ಟಿಯನ್ನು ಏ.16ರಂದು ಪ್ರಕಟಿಸಿ, ಏ.21ನ್ನು ಕೊನೆಯ ದಿನವಾಗಿ ಪರಿಗಣಿಸಬೇಕು. ಬರಲಿರುವ ಶೈಕ್ಷಣಿಕ ವರ್ಷ 2014–15ರಿಂದ ಇದು ಜಾರಿಯಾಗಲಿದೆ.

ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಈ ವೇಳಾಪಟ್ಟಿ ಅನ್ವಯವಾಗಲಿದೆ. ಖಾಸಗಿ ಶಾಲೆಗಳು ಅರ್ಜಿ ಶುಲ್ಕವನ್ನು ಬೇಕಾಬಿಟ್ಟಿ ಏರಿಸುವಂತಿಲ್ಲ. ಅವಕ್ಕೂ ಸರ್ಕಾರ ನಿರ್ದಿಷ್ಟ ದರ ನಿಗದಿ ಮಾಡಿದೆ. ಪ್ರವೇಶ ಅರ್ಜಿಗೆ 5ರೂ., ಕೈಪಿಡಿಗೆ 20ರೂ., ಅಂಕಪಟ್ಟಿ, ವರ್ಗಾವಣೆ ಪತ್ರ, ನಡತೆ ಪ್ರಮಾಣ ಪತ್ರ ಮತ್ತಿತರ ಪತ್ರಗಳಿಗೆ 25ರೂ.ಗಳನ್ನು ಮಾತ್ರ ವಸೂಲಿ ಮಾಡಬೇಕು. ಅನುದಾನಿತ ಶಾಲೆಗಳು 1ರಿಂದ 5ರ ವರೆಗೆ ಬೋಧನೇತರ, ಬೋಧನೆ ಮತ್ತು ವಿಶೇಷ ಅಭಿವೃದ್ಧಿ ಶುಲ್ಕ ಪಡೆಯುವಂತಿಲ್ಲ. 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪಡೆಯುವಂತಿಲ್ಲ. ಅನುದಾನ ರಹಿತ ಶಾಲೆಗಳು 600ರೂ. ವರೆಗೆ ವಿಶೇಷ ಅಭಿವೃದ್ಧಿ ಶುಲ್ಕ ಪಡೆಯಬಹುದು. ಬೋಧನಾ ಶುಲ್ಕವನ್ನು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 2(ಬಿ)ಅನ್ವಯ ಪಡೆಯಬೇಕು. ಬೋಧನೇತರ ಶುಲ್ಕ ಇರುವುದಿಲ್ಲ.

ಉಚಿತ ಮತ್ತು ಕಡ್ಡಾಯ ಮಕ್ಕಳ ಹಕ್ಕು ಕಾಯ್ದೆಯ ಅನ್ವಯ ನೀಡುವ ಶೇ. 25ರಷ್ಟು ಸೀಟುಗಳ ಪ್ರವೇಶ ಪ್ರಕ್ರಿಯೆ ಜನವರಿ 7ರಿಂದ ಆರಂಭವಾಗಿ ಫೆ.7ರ ವರೆಗೆ ನಡೆಯಲಿದೆ. ಅಲ್ಲಿ ಸೀಟು ಸಿಗದೇ ಹೋದ ವಿದ್ಯಾರ್ಥಿಗಳು ಸಾಮಾನ್ಯ ವಿಭಾಗದಲ್ಲಿ ಅರ್ಜಿ ಹಾಕಿಕೊಳ್ಳಬಹುದಾಗಿದೆ. ಮಾರ್ಚ್ ತಿಂಗಳಿನಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಶುರುವಾಗುವುದರಿಂದ ಇದೂ ಕೂಡ ಮತ್ತೊಂದು ಅನುಕೂಲಕರ ಅಂಶವಾಗಿದೆ.

ಶಿಕ್ಷಣ ಇಲಾಖೆಯ ಆದೇಶದಲ್ಲಿರುವ ಮತ್ತೊಂದು ಮಹತ್ವದ ಸಂಗತಿ ಎಂದರೆ ಇನ್ನು ಮುಂದೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಯಾವುದೇ ರೀತಿಯ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನ ನಡೆಸುವಂತಿಲ್ಲ. ಈ ನಿಯಮವನ್ನು ಉಲ್ಲಂಘಿಸಿದರೆ 25 ಸಾವಿರ ರೂ. ದಂಡ ತೆರಬೇಕು. 2ನೇ ಬಾರಿ ತಪ್ಪು ಮಾಡಿದರೆ 50 ಸಾವಿರ ರೂ. ದಂಡ ಕಟ್ಟಬೇಕು. ಮಕ್ಕಳಿಗೆ ಶಾಲೆಯಲ್ಲಿ ಪ್ರವೇಶ ನೀಡಲು ಅವರ ತಂದೆ ತಾಯಿಗಳಿಗೆ ಸಂದರ್ಶನ ನೀಡುವ ಕ್ರಮವಂತೂ ಹಾಸ್ಯಾಸ್ಪದವಾಗಿತ್ತು. ಹಿಂದಿನ ವರ್ಷದ ಸೆಪ್ಟಂಬರ್, ಅಕ್ಟೋಬರ್ ತಿಂಗಳಿನಲ್ಲೇ ಈ ಎಲ್ಲಾ ಅಣಕಗಳು ಶುರುವಾಗಿಬಿಡುತ್ತಿದ್ದವು. ಕಾಯ್ದೆ ಕಟ್ಟುನಿಟ್ಟಾಗಿ ಜಾರಿಯಾದರೆ, ಇನ್ನುಮುಂದೆ ಇದಕ್ಕೆಲ್ಲ ತಡೆ ಬೀಳಲಿದೆ.

ನಿಯಮಗಳು ಸರಿಯಾಗಿ ಜಾರಿಯಾದರೆ, ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಿ ಕ್ರಮ ಎಂದೇ ಹೇಳಬಹುದಾಗಿದೆ. ಕೆಲವು ಶಾಸಕರು, ಮಂತ್ರಿಗಳೇ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದು, ಭಾರೀ ಪ್ರಮಾಣದಲ್ಲಿ ಡೊನೇಷನ್ ಸಂಗ್ರಹಿಸುವುದು ರಾಜಾರೋಷವಾಗಿ ನಡೆಯುತ್ತಿದೆ. ಇಂತಹ ಲಾಬಿಗಳಿಂದ ಸರ್ಕಾರ ಮುಕ್ತವಾದರೆ, ನಿಯಮಗಳನ್ನು ಜಾರಿಗೊಳಿಸುವುದು ಸಲೀಸಾಗಲಿದೆ. ಸಾರ್ವಜನಿಕರ ಸಹಕಾರವೂ ಬಹಳ ಮುಖ್ಯ. ನಿಯಮವನ್ನು ಜಾರಿಗೊಳಿಸುವ ಶಿಕ್ಷಣ ಇಲಾಖೆ ಅಧಿಕಾರಿಗಳ ಮನವಿಯೂ ಅದೇ ಆಗಿದೆ. 'ಚಾಪೆ ಕೆಳಗೆ ತೂರಿದರೆ, ರಂಗೋಲಿ ಕೆಳಗೆ ತೂರುತ್ತೇನೆ' ಎನ್ನುವವರು ಇರಬಹುದು. ಆದರೆ ಎಲ್ಲ ಅಕ್ರಮಗಳಿಗೆ ತಡೆಒಡ್ಡುವ ಶಕ್ತಿ ಸಾರ್ವಜನಿಕರಿಗೆ ಇದೆ. ಸಮಾನ ಶಿಕ್ಷಣದಲ್ಲಿ ಆಸಕ್ತರಾದ ಚಿಂತಕರು, ಕ್ರಿಯಾಶೀಲರ ಒತ್ತಾಸೆಯ ಫಲವಾಗಿ ಇಂತಹದೊಂದು ಕಾಯ್ದೆ ಜಾರಿಯಾಗಿದೆ. ಅದನ್ನು ಯಶಸ್ವಿಯಾಗಿಸುವ ಶಕ್ತಿ ಶ್ರೀಸಾಮಾನ್ಯರಲ್ಲಿದೆ.

**■ ಗುಡಿಹಳ್ಳಿ ನಾಗರಾಜ**

